ವಿತ್ತ ಸಂಚಿಕೆ

ಜನವರಿ–2025

# INSPIRE INDIA

## ಸಲಹೆ ನಮ್ಮದು ಹೂಡಿಕೆ ನಿಮ್ಮದು



ಶರಣ್ ಪಾಟೀಲ್
ಆರ್ಥಿಕ ತಜ್ಞರು

INSPIRE INDIA WEALTH PRIVATE LTD. @ 65, 'Surasa Enclave' 1st floor, Puttanna Road, Gandhi Bazar
Basvanagudi, Bengaluru 560004, Ph: +91 8042129917, 9035414414. Mail: info@inspireindiafs.com Website: www.inspireindiafs.com

## ವರ್ಷದ ಗೋಡೆಯ ಮೇಲೆ

# ಮೂಡಲಿ ಸಂಪತ್ತಿನ ಚಿತ್ರ

**ಇನ್ನೊಂದು** ವರುಷ ಮಗ್ಗುಲು ಬದಲಿಸಿದೆ. ಹೊಸ ವರುಷ ಅಂಬೆಗಾಲಿಟ್ಟು ಹೊಸ್ತಿಲು ದಾಟುತ್ತಿದೆ. ನಿಮ್ಮ ಜೀವನದ ಸ್ಲೇಟ್‌ನಲ್ಲಿ ಕಳೆದ ವರ್ಷ ಆದ ಹಿನ್ನಡೆಗಳನ್ನೆಲ್ಲ ಅಳಿಸಿಹಾಕಲು ಇದಕ್ಕಿಂತ ಸೂಕ್ತ ಸಮಯ ಇನ್ನೊಂದಿಲ್ಲ.

ಹೇಳಿಕೇಳಿ ಇದು ನಿರ್ಣಯದ ಹೊತ್ತು. ಅನೇಕರು ಅನೇಕ ನಿರ್ಣಯಗಳನ್ನು ಕೈಗೊಳ್ಳುತ್ತಾರೆ. ಈ ಬಾರಿ ಕಟ್ಟುನಿಟ್ಟಿನಿಂದ ಪಥ್ಯ ಮಾಡಬೇಕು, ತೂಕ ಇಳಿಸಿಕೊಳ್ಳಬೇಕು, ಕೆಟ್ಟ ಚಟಗಳನ್ನೆಲ್ಲ ಬಿಟ್ಟು ಮುಂದಕ್ಕೆ ಸಾಗಬೇಕು... ಹೀಗೆ ಪಟ್ಟಿ ಬೆಳೆಯುತ್ತದೆ. ಅದೇ ರೀತಿ ನಿಮ್ಮ ಹಣಕಾಸು ಕಾರ್ಯತಂತ್ರಕ್ಕೆ ಹೊಸ ಶಕ್ತಿ, ಚೈತನ್ಯ ತುಂಬುವುದಕ್ಕೂ ಇದು ಸಕಾಲ ಎಂಬುದನ್ನು ಮರೆಯದಿರಿ.

ನೀವು ನಿಮ್ಮ ಸಂಪತ್ತಿನ ಸೌಧವನ್ನು ಇನ್ನಷ್ಟು ಎತ್ತರಕ್ಕೆ ಕಟ್ಟುತ್ತೀರೋ, ನಿಮ್ಮ ಬಂಡವಾಳದ ಪಟ್ಟಿಯನ್ನು ಇನ್ನಷ್ಟು ವೈವಿಧ್ಯಗೊಳಿಸುವಿರೋ ಅಥವಾ ತುಂಬಾ ಸ್ಮಾರ್ಟ್ ನಿರ್ಧಾರಗಳನ್ನು ಕೈಗೊಳ್ಳುವಿರೋ, ನಿಮ್ಮ ಹೂಡಿಕೆಯನ್ನು ಹೊಸ ಎತ್ತರಕ್ಕೆ ಕೊಂಡೊಯ್ಯಲು 2025 ಹೊಸ ಅವಕಾಶವನ್ನು ಕಲ್ಪಿಸಲಿ ಎಂಬುದೇ ನಮ್ಮ ಹಾರೈಕೆ. ಈ ಹಿನ್ನೆಲೆಯಲ್ಲಿ ನಿಮ್ಮ ಹೊಸ ವರ್ಷದ ನಿರ್ಣಯಗಳ ಪಟ್ಟಿಗೆ ಹಣಕಾಸು ಶಿಸ್ತನ್ನು ಯಾಕೆ ಸೇರಿಸಬಾರದು?

ಒಬ್ಬ ಹೂಡಿಕೆದಾರನಾಗಿ 2025ನ್ನು ಅತ್ಯಂತ ಯಶಸ್ವಿಯಾಗಿ ಮಾಡುವುದು ಹೇಗೆ ಎಂಬುದಕ್ಕೆ ಇಲ್ಲಿದೆ ಒಂದಷ್ಟು ಟಿಪ್ಸ್:




## ಇದು ನಿರ್ಣಯ ಕೈಗೊಳ್ಳುವ ಹೊತ್ತು

ಮರುಮೌಲ್ಯಮಾಪನ–ನಿಮ್ಮ ಖರ್ಚಿನ ಅಭ್ಯಾಸ: ಇತ್ತೀಚಿನ ದಿನಗಳಲ್ಲಿ ಅವಸರಕ್ಕೆ ಬಿದ್ದು ಖರ್ಚುಮಾಡುವುದು ಸಾಮಾನ್ಯವಾಗಿ ಹೋಗಿದೆ. ತಂತ್ರಜ್ಞಾನದ ದೆಸೆಯಿಂದಾಗಿ ಸಾಲು ಸಾಲು ಆನ್‌ಲೈನ್ ಸ್ಟೋರ್‌ಗಳು ಹುಟ್ಟಿಕೊಂಡಿರುವ ಕಾರಣ ಎಲ್ಲವೂ ನಮ್ಮ ಬೆರಳ ತುದಿಯಲ್ಲಿಯೇ ಸಿಕ್ಕೂಬಿಡುತ್ತವೆ. ಕೈಯಲ್ಲೊಂದು ಫೋನ್ ಇದ್ದರೆ ಸಾಕು. ಕೆಲವೇ ಕೆಲವು ಕ್ಲಿಕ್‌ಗಳಿಂದ ಟ್ರೆಂಡಿ ಟ್ರೆಂಡಿ ಸಾಧನಗಳನ್ನು ಖರೀದಿಸುವುದೇನೂ ಕಷ್ಟವಲ್ಲ. ಇಂತಹ ಸಣ್ಣ ಸಣ್ಣ ವಸ್ತುಗಳನ್ನು ಖರೀದಿ ಮಾಡುವ ಹೊತ್ತಿನಲ್ಲಿ ನಾವು ಅಷ್ಟೇನೂ ಚಿಂತೆ ಮಾಡುವುದಿಲ್ಲ. ಆದರೆ ಅಂತಹ ಸಣ್ಣ ಸಣ್ಣ ಸಂಗತಿಗಳು ಸರದಿಯಂತೆ ಸೇರ್ಪಡೆಯಾಗುತ್ತ ಹೋದಂತೆ ನಮ್ಮ ಕಾಸೆಲ್ಲ ಎಲ್ಲಿ ಖರ್ಚಾಗಿ ಹೋಯಿತು ಎಂದು ಚಿಂತಿಸಲು ಶುರುಮಾಡುತ್ತೇವೆ.

ಹಾಗಾಗಿ ಇಂತಹ ಸಣ್ಣ ಸಣ್ಣ ಖರ್ಚಿನ ಮೇಲೆ ನಿಗಾ ಇಡೋಣ. ಅದನ್ನೆಲ್ಲ ನಿಯಂತ್ರಿಸುತ್ತ ಹೋಗೋಣ ಎಂಬುದು ಈ ವರ್ಷದ ನಿರ್ಣಯಗಳ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆಯಲಿ. ಬಯಕೆಗಳ ಪಟ್ಟಿಯಲ್ಲಿ ನಿಜಕ್ಕೂ ಅಗತ್ಯವಿರುವುದು ಯಾವುದು ಎನ್ನುವುದಕ್ಕೆ ಆದ್ಯತೆ ನೀಡಿ. ಇದರರ್ಥ ಎಲ್ಲ ಖರ್ಚು–ವೆಚ್ಚಗಳಿಗೂ ಕತ್ತರಿ ಹಾಕಬೇಕು ಎಂದೇನೂ ಅಲ್ಲ. ಬದುಕನ್ನು ಎಂಜಾಯ್ ಮಾಡಲು ಎಷ್ಟು ಬೇಕೋ ಅಷ್ಟನ್ನು ಮಾಡುತ್ತಿರಿ. ಆದರೆ ಸಮತೋಲನ ಕಾಯ್ದುಕೊಳ್ಳಿ. ಅತಿಯಾದ ತ್ಯಾಗ ಮಾಡಬೇಕಂತೇನೂ ಇಲ್ಲ. ಅದು ನಿಮ್ಮ ಒಟ್ಟಾರೆ ಸಂತೋಷವನ್ನು ಕಸಿದುಕೊಳ್ಳಬಹುದು. ಹಾಗಾಗಿ ಜೀವನದ ಸಂತೋಷದ ಜೊತೆಗೆ ರಾಜಿ ಮಾಡಿಕೊಳ್ಳದೆ ವಿವೇಚನೆಯಿಂದ ಖರ್ಚುಗಳನ್ನು ನಿಭಾಯಿಸುತ್ತ ಹೋಗಿ.

**ಹೂಡಿಕೆಯನ್ನು ಚಾಲ್ತಿಯಲ್ಲಿಡಿ:**

ನಿಮ್ಮ ಹಣಕಾಸು ಅಗತ್ಯಗಳಿಗೆ ಭದ್ರ ಬುನಾದಿಯನ್ನು ಹಾಕಬೇಕಾದರೆ ಹೂಡಿಕೆ ವಿಚಾರದಲ್ಲಿ ನಿರಂತರ ಹಾಗೂ ವ್ಯವಸ್ಥಿತ ನಿಲುವನ್ನು ಹೊಂದಿರಬೇಕು. ಇದಕ್ಕಾಗಿ ಮಾಡಬಹುದಾದ ಒಂದು ಪರಿಣಾಮಕಾರಿ ವಿಧಾನವೆಂದರೆ ವ್ಯವಸ್ಥಿತ ಹೂಡಿಕೆ ಯೋಜನೆ (ಎಸ್‌ಐಪಿ)ಯನ್ನು ಅನುಸರಿಸುವುದು. ಅಂದರೆ ಆಗಾಗ ನಿರ್ದಿಷ್ಟವಾದ ಮೊತ್ತವನ್ನು ಸ್ವಯಂಚಾಲಿತವಾಗಿ ಹೂಡಿಕೆಮಾಡುತ್ತ ಹೋಗುವುದು.

ಇಂತಹ ಕಾರ್ಯತಂತ್ರದಿಂದ ನೀವು ಹೂಡಿಕೆ ವಿಚಾರದಲ್ಲಿ ಶಿಸ್ತುಬದ್ಧವಾಗಿರಲು ಸಾಧ್ಯವಾಗುತ್ತದೆ ಮತ್ತು ಮಾರುಕಟ್ಟೆ ಏರಿಳಿತದ ಬಗ್ಗೆ ಚಿಂತಿಸಬೇಕಾದ ಅಗತ್ಯವಿರುವುದಿಲ್ಲ.

**ಹಣಕಾಸು ತಿಳುವಳಿಕೆ ಹೆಚ್ಚಲಿ:** "ಜ್ಞಾನದ ಮೇಲೆ ಮಾಡಿದ ಹೂಡಿಕೆಗೆ ಸಿಗುವಷ್ಟು ಬಡ್ಡಿ ಬೇರೆ ಯಾವುದರಿಂದಲೂ ಸಿಗದು" ಎಂಬ ಬೆಂಜಮಿನ್ ಫ್ರಾಂಕ್ಲಿನ್ ಅವರ ಮಾತು ಹೆಚ್ಚು ಅರ್ಥಪೂರ್ಣ. ನಿಮ್ಮ ಹಣಕಾಸು ಜ್ಞಾನವನ್ನು ವೃದ್ಧಿಸಿಕೊಳ್ಳಲು ಸಮಯವನ್ನು ವಿನಿಯೋಗ ಮಾಡುವುದ–ರಿಂದ ಸಿಗುವ ಬಹುಮಾನ ಸುದೀರ್ಘ ಕಾಲದ್ದು. ಹಣಕಾಸು ವಿದ್ಯಾಮಾನಗಳಲ್ಲಿ ಕಾಲಕಾಲಕ್ಕೆ ಬದಲಾವಣೆ ಸಂಭವಿಸುತ್ತಿರುತ್ತವೆ, ಮಾರುಕಟ್ಟೆಯಲ್ಲಿನ ಟ್ರೆಂಡ್ ಬದಲಾಗುತ್ತ ಹೋದ ಹಾಗೆ ಹೊಸ ಹೊಸ ಹೂಡಿಕೆ ಅವಕಾಶಗಳು ಲಭ್ಯವಾಗುತ್ತವೆ. ಇವೆಲ್ಲದರ ಬಗ್ಗೆ ಜ್ಞಾನವನ್ನು ವೃದ್ಧಿಸಿಕೊಳ್ಳುವುದರಿಂದ ಮಾಹಿತಿಪೂರ್ಣ ನಿರ್ಧಾರವನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ. ಹಣಕಾಸು ಸಂಬಂಧಿ ಲೇಖನಗಳನ್ನು ಓದುವುದು, ಪಾಡ್‌ಕಾಸ್ಟ್‌ಗಳನ್ನು ಆಲಿಸುವುದು ಅಥವಾ ಶೈಕ್ಷಣಿಕ ವಿಡಿಯೋಗಳನ್ನು ವೀಕ್ಷಿಸುವುದರಿಂದ ಹಣಕಾಸು ತಿಳುವಳಿಕೆ ಹೆಚ್ಚುತ್ತದೆ. ಆರಂಭದಲ್ಲಿ ವಾರಕ್ಕೊಮ್ಮೆ ಇಂತಹ ಅಭ್ಯಾಸ ಮಾಡಿಕೊಳ್ಳಿ. ಕ್ರಮೇಣ ಅದನ್ನು ದೈನಂದಿನ ಅಭ್ಯಾಸವಾಗಿ ರೂಢಿಸಿಕೊಳ್ಳಿ. ಹಣಕಾಸು ಸಿದ್ಧಾಂತಗಳ ಬಗ್ಗೆ ನೀವು ಹೆಚ್ಚು ಹೆಚ್ಚು ತಿಳಿದುಕೊಳ್ಳುತ್ತಿದ್ದಂತೆ ನಿಮ್ಮ ಹಣವನ್ನು ನಿಭಾಯಿಸುವ ಶಕ್ತಿ ಬರುತ್ತದೆ. ಹಣ–ಕಾಸು ಆಯ್ಕೆಗಳಲ್ಲಿ ನೀವು ಇನ್ನಷ್ಟು ಸ್ಮಾರ್ಟ್ ಆಗುತ್ತೀರಿ.

**ಬಜೆಟ್ ಕೌಶಲ್ಯ:** ಇದೊಂದು ಸಣ್ಣ ಹೆಜ್ಜೆ ಎಂದು ನಿಮಗೆ ಅನಿಸಬಹುದು.ಸರಿಯಾದ ಬಜೆಟ್ ಮಾಡುವುದರಿಂದ ನಿಮ್ಮ ಹಣಕಾಸು ಸ್ಥಿರತೆಯ ಮೇಲೆ ಬಹಳ ದೊಡ್ಡ ಪರಿಣಾಮ ಬೀರುವುದಂತೂ ಖಚಿತ.ನಿಮ್ಮ ಆದಾಯ ಮತ್ತು ಖರ್ಚಿನ ಮೇಲೆ ಕಣ್ಣಿಡಿ.ನಿಮ್ಮ ಹಣ ಎಲ್ಲಿ ಹೆಚ್ಚು ವ್ಯಯವಾಗುತ್ತಿದೆ ಎಂಬುದರ ಸ್ಪಷ್ಟ ಚಿತ್ರಣ ನಿಮಗೆ ತಿಳಿದಿರಲಿ. ಖರ್ಚುಗಳನ್ನು ಅತ್ಯಾವಶ್ಯಕ ಮತ್ತು ಅನವಶ್ಯಕ ಎಂಬ ವಿಭಾಗಗಳಾಗಿ ವಿಂಗಡಿಸಿ. ಬಾಡಿಗೆ ಅಥ–ವಾ ಮನೆ ಸಾಲದ ಪಾವತಿ, ದಿನಸಿ ಮುಂತಾದ ಅವಶ್ಯಕತೆಗಳನ್ನು ನೀವು ಪೂರೈಸಲೇಬೇಕಾಗುತ್ತದೆ. ಅನವಶ್ಯಕ ವೆಚ್ಚಗಳೆಂದರೆ ನಿಮ್ಮ 'ಬಯಕೆಗಳು'. ಮನರಂಜನೆ, ಹವ್ಯಾಸಗಳು, ಐಷಾರಾಮಿ ಸಂಗತಿಗಳು ಇದರಲ್ಲಿ ಒಳಗೊಂಡಿವೆ. ಇಂತಹ ವೆಚ್ಚಗಳನ್ನು ವಿಭಾಗಗಳಾಗಿ ಮಾಡುವುದ–ರಿಂದ ಎಲ್ಲಿ ಅವುಗಳಿಗೆ ಕತ್ತರಿ ಪ್ರಯೋಗ ಮಾಡಬಹುದು ಮತ್ತು ಅವುಗಳನ್ನು ಉಳಿತಾಯ ಅಥವಾ ಹೂಡಿಕೆಗಳಲ್ಲಿ ತೊಡಗಿಸಬಹುದು ಎಂಬ




ಐಡಿಯಾ ಸಿಗುತ್ತದೆ.

**ತುರ್ತಿಗೊಂದು ನಿಧಿ ಇರಲಿ:** ಅನಿರೀಕ್ಷಿತ ಖರ್ಚುಗಳು ನಿಮ್ಮ ಹಣಕಾಸು ಗುರಿಯ ಹಳಿ ತಪ್ಪಿಸದೇ ಇರಲಿ. ಅದಕ್ಕಾಗಿ ತುರ್ತು ನಿಧಿ ಇದ್ದುಬಿಟ್ಟರೆ ಭದ್ರತೆ ಒದಗಿಸುತ್ತದೆ ಮತ್ತು ನೆಮ್ಮದಿಯಿಂದ ಇದ್ದುಬಿಡಬಹುದು.ಉದ್ಯೋಗ ನಷ್ಟ, ವೈದ್ಯಕೀಯ ವೆಚ್ಚ ಅಥವಾ ಮನೆ ರಿಪೇ–ರಿಯಂತಹ ಅನಿರೀಕ್ಷಿತ ಹಣಕಾಸು ಪ್ರವಾಹಗಳಿಂದ ಪಾರಾಗುವುದು ಸುಲಭವಾಗುತ್ತದೆ. ಅದಕ್ಕಾಗಿ ಮೂರರಿಂದ ಆರು ತಿಂಗಳಿಗಾಗುವಷ್ಟು ವೆಚ್ಚವನ್ನು ಉಳಿತಾಯ ಮಾಡುವ ಗುರಿ ಇಟ್ಟುಕೊಳ್ಳಬೇಕು. ನಿಮ್ಮ ಆದಾಯದ ಒಂದು ಚಿಕ್ಕ ಭಾಗವನ್ನು ಎತ್ತಿಡುವುದರಿಂದ ಸಿಗುವ ಮಾನಸಿಕ ನೆಮ್ಮದಿ ದೊಡ್ಡದು.

**ವಿಮೆ ಸೌಲಭ್ಯದ ಕಡೆಗೆ ಗಮನ:** ವಿಮೆಯನ್ನು ನಿಮ್ಮ ಹಣಕಾಸು ಯೋಜನೆಯಿಂದ ಹೊರಗಿಡುವಂತೆಯೇ ಇಲ್ಲ. ನಿಮ್ಮ ಸಂಪತ್ತನ್ನು ಸುಭದ್ರಮಾಡಿದ ಹಾಗೆ ನಿಮ್ಮ ಪ್ರೀತಿಪಾತ್ರರ ಸುರಕ್ಷತೆಯೂ ಮುಖ್ಯ. ಹೊಸ ವರ್ಷ ಆರಂಭವಾಗುವ ಈ ಹೊತ್ತಿನಲ್ಲಿ ನಿಮ್ಮ ವಿಮಾ ಪಾಲಿಸಿಗಳ ಪರಾಮರ್ಶೆ ನಡೆಸುವುದು ಹಾಗೂ ಅದು ನೀಡುತ್ತಿರುವ ಕವರೇಜ್ ಸಾಕಷ್ಟಿದೆಯೇ, ಜೀವನದಲ್ಲಾಗಿರುವ ಇತ್ತೀಚಿನ ಬದಲಾವಣೆಗೆ ಅದು ಪರಿಪೂರ್ಣವಾಗಿದೆಯೇ ಎಂದು ಪರಿಶೀಲಿಸುವುದು ಉತ್ತಮ. ಉದಾಹರಣೆಗೆ, ಇತ್ತೀಚಿಗೆ ನಿಮ್ಮ ಉದ್ಯೋಗದಲ್ಲಿ ಬದಲಾವಣೆಯಾಗಿದ್ದರೆ, ನೀವು ಮದುವೆಯಾಗಿದ್ದರೆ ಅಥವಾ ಮಗುವಾಗಿದ್ದರೆ ನಿಶ್ಚಿತವಾಗಿ ನಿಮ್ಮ ವಿಮಾ ಕವರೇಜ್‌ನಲ್ಲಿ ಬದಲಾವಣೆ ಮಾಡಬೇಕಾಗುತ್ತದೆ. ಅನೇಕರು ಮಾಡುವ ತಪ್ಪು ಏನೆಂದರೆ ವಿಮಾ ಪಾಲಿಸಿ ಖರೀದಿ ಮಾಡದಿರುವುದು. ನಿಮ್ಮ ಟರ್ಮ್ ಇನ್ಸುರೆನ್ಸ್‌ನಿಂದ ದಕ್ಕುವ ಒಟ್ಟು ಮೊಬಲಗು ನಿಮ್ಮ ವಾರ್ಷಿಕ ಆದಾಯಕ್ಕಿಂತ ಕನಿಷ್ಠ 8ರಿಂದ ಹತ್ತು ಪಟ್ಟು ಹೆಚ್ಚಿರುವಂತೆ ನೋಡಿಕೊಳ್ಳಿ. ಬಾಕಿಯಿರುವ ಸಾಲದ ಕಂತುಗಳ ಹೊರೆ ನಿಮ್ಮ ಅವಲಂಬಿತರನ್ನು ಬಾಧಿಸದಿರಲಿ. ಇನ್ನು ಹೆಚ್ಚುವರಿಯಾಗಿ, ಇತ್ತೀಚೆಗೆ ಏರುತ್ತಿರುವ ಆರೋಗ್ಯ ಸೇವಾ ವೆಚ್ಚಗಳ ಹಿನ್ನೆಲೆಯಲ್ಲಿ ನಿಮಗೆ ಮತ್ತು ನಿಮ್ಮ ಕುಟುಂಬಕ್ಕೂ ವಿಮಾ ಪಾಲಿಸಿ ಇರುವಂತೆ ನೋಡಿಕೊಳ್ಳಿ.

**ಅಗತ್ಯಗಳ ನಕ್ಷೆ:** ನಿಮ್ಮ ಅಗತ್ಯಗಳು ಅಥವಾ ಉದ್ದೇಶಗಳೇನು ಎಂಬುದನ್ನು ಕಂಡುಕೊಳ್ಳಲು ಮತ್ತು ಅವುಗಳಿಗೊಂದು ರೂಪ ಕೊಡಲು ಶಕ್ತಿಶಾಲಿ ತಂತ್ರವೆಂದರೆ ಅಗತ್ಯಗಳ ನಕ್ಷೆ ಸಿದ್ಧಪಡಿಸುವುದು. ಅದು ನಿಮಗೊಂದು ಸ್ಪಷ್ಟತೆ, ಸ್ವರೂಪ ಮತ್ತು ದಿಕ್ಕನ್ನು ನೀಡುತ್ತದೆ ಮತ್ತು ನಿಮ್ಮ ಆಕಾಂಕ್ಷೆಗಳನ್ನು ಕಾರ್ಯರೂಪಕ್ಕೆ ಬರುವ ಕ್ರಮಗಳಾಗಿ ಪರಿವರ್ತಿಸುತ್ತದೆ. ನಿಮ್ಮ ಅಗತ್ಯಗಳ ಬಗೆಗೆ ಸ್ಪಷ್ಟತೆ ಇರಲಿ. ಅಗತ್ಯಗಳು ಯಾವುದು ಎಂಬುದರ ಪಟ್ಟಿ ಮಾಡಿದರೆ ಅವುಗಳನ್ನು ಚಿಕ್ಕದು ಮತ್ತು ನಿಭಾಯಿಸಬಹುದಾದ ಹೆಜ್ಜೆಗಳೆಂದು ವಿಭಾಗಿಸಬಹುದು. ಪ್ರತಿಯೊಂದು ಹೆಜ್ಜೆ ಅಥವಾ ಮೈಲುಗಲ್ಲಿಗೆ ಒಂದು ಗಡುವನ್ನು ನಿಗದಿಪಡಿಸಬೇಕು. ಹೀಗೆ ಮಾಡುವುದ–ರಿಂದ ಯಾವುದು ಅತ್ಯಗತ್ಯವಾಗಿದೆ, ತುರ್ತಾಗಿ ಆಗಬೇಕಿದೆ ಎಂಬುದು ಅರಿವಾಗುತ್ತದೆ ಮತ್ತು ಆ ಹಾದಿಯಲ್ಲಿ ನಡೆಯಲು ಪ್ರೇರಣೆ ನೀಡುತ್ತದೆ.

**ಪೋರ್ಟ್‌ಫೋಲಿಯೋ ಪರಾಮರ್ಶೆ:** ಯಾವುದೇ ಒಬ್ಬ ಹೂಡಿಕೆದಾರ ಮಾಡಬಹುದಾದ ಬಹುಮುಖ್ಯ ನಿರ್ಣಯಗಳಲ್ಲಿ ಒಂದೆಂದರೆ ತಮ್ಮ ಹೂಡಿಕೆ ಪೋರ್ಟ್‌ಫೋಲಿಯೋವನ್ನು ಪರಾಮರ್ಶೆಗೆ ಒಳಪಡಿಸುವುದು. ಇದರಲ್ಲಿ ನಿಮ್ಮ ಸದ್ಯದ ಅಪಾಯವನ್ನು ಸಹಿಸಿಕೊಳ್ಳುವ ಶಕ್ತಿ, ಹಣಕಾಸು ಅಗತ್ಯಗಳು ಮತ್ತು ಮಾರುಕಟ್ಟೆ ಪರಿಸ್ಥಿತಿಗೆ ತಕ್ಕಂತೆ ಆಸ್ತಿ ಹಂಚಿಕೆಯನ್ನು ಮೌಲ್ಯಮಾಪನ ಮಾಡುವುದು ಸೇರಿರುತ್ತದೆ. ಇತ್ತೀಚಿನ ಕೆಲವು ದಿನಗಳಲ್ಲಿ ನೀವು ನಿಮ್ಮ ಪೋರ್ಟ್‌ಫೋಲಿಯೋ ಪರಾಮರ್ಶೆ ಮಾಡದೇ

ಇದ್ದರೆ ಕೆಲವು ವಲಯಗಳಲ್ಲಿ ಅದು ಅತಿಯಾಗಿ ಬಳಕೆಯಾಗಿರಬಹುದು ಮತ್ತು ಇನ್ನು ಕೆಲವು ವಲಯಗಳಲ್ಲಿ ಬಳಕೆಯಾಗದೇ ಇದ್ದಿರಬಹುದು. ಅದಕ್ಕಾಗಿ ಮಾಡಬಹುದಾದ ಒಂದು ಕಾರ್ಯತಂತ್ರವೆಂದರೆ ಎಸ್‌ಐಪಿ ಟಾಪ್‌ಅಪ್. ಹಾಗೆ ಮಾಡುವುದರಿಂದ ಮ್ಯುಚ್ಯುಯಲ್ ಫಂಡ್‌ಗಳಲ್ಲಿ ನಿಮ್ಮ ಮಾಸಿಕ ಹೂಡಿಕೆಯ ಪ್ರಮಾಣದಲ್ಲಿ ಏರಿಕೆಯಾಗುತ್ತದೆ. ನಿಮ್ಮ ಆದಾಯ ದಲ್ಲಿ ಏರಿಕೆಯಾಗುತ್ತಿದ್ದಂತೆ ನಿಮ್ಮ ಉದ್ಯೋಗ ಅಥವಾ ವೈಯಕ್ತಿಕ ಜೀವನದಲ್ಲಿ ಹೊಸ ಮೈಲಿಗಲ್ಲುಗಳನ್ನು ತಲುಪುತ್ತೀರಿ. ಇದರಿಂದ ನಿಮ್ಮ ಹಣಕಾಸು ಆಕಾಂಕ್ಷೆಗಳು ಮತ್ತು ಹಣದುಬ್ಬರದ ಜೊತೆಗೆ ನಿಮ್ಮ ಪೋರ್ಟ್‌ಫೋಲಿಯೋ ಕೂಡ ವಿಸ್ತಾರವಾಗುತ್ತದೆ.

**ಭಾವನಾತ್ಮಕ ಹೂಡಿಕೆ ಕೈಬಿಡಿ:** ಯಶಸ್ವಿ ಹೂಡಿಕೆಗೆ ಇರುವ ದೊಡ್ಡ ಅಡ್ಡಿ ಎಂದರೆ ಭಾವನಾತ್ಮಕ ನಿರ್ಧಾರಗಳನ್ನು ಕೈಗೊಳ್ಳುವುದು. ಹೊಸ ವರ್ಷದ ಹೊಸ್ತಿಲಲ್ಲಿ ನಿಂತಿರುವ ನೀವು ನಿಮ್ಮ ಮನಸ್ಥಿತಿಯನ್ನು ಬದಲಿಸಿಕೊಂಡು ಮಾರುಕಟ್ಟೆಯ ಅಸ್ಥಿರತೆಗೆ ತಕ್ಷಣ ಪ್ರತಿಕ್ರಿಯೆ ನೀಡುವುದಿಲ್ಲ ಎಂಬ ನಿರ್ಣಯ ಕೈಗೊಳ್ಳುವುದು. ನಿಮಗೆ ಸಂಪೂರ್ಣವಾಗಿ ಅರ್ಥವಾಗದೇ ಇರುವುದರಲ್ಲಿ ಎಂದಿಗೂ ಹೂಡಿಕೆ ಮಾಡದಿರಿ. ಸೆಲೆಬ್ರಿಟಿಗಳು ಹೇಳಿದರು ಎಂದ ಮಾತ್ರಕ್ಕೆ ಅಥವಾ ಆನ್‌ಲೈನ್‌ನಲ್ಲಿ ಹಾದುಹೋದ ಪ್ರಮೋಷನ್‌ಗಳಿಗೆ ಮರುಳಾಗಿ ಹೂಡಿಕೆ ನಿರ್ಧಾರಗಳನ್ನು ಕೈಗೊಳ್ಳಬೇಡಿ.ಯಾವುದೇ ಹೂಡಿಕೆ ಮಾಡಿದರೂ ಅದು ನಿಮ್ಮ ಹಣಕಾಸು ಉದ್ದೇಶಗಳಿಗೆ ಅನುಗುಣವಾಗಿರಲಿ. ಪ್ರತಿಯೊಂದು ಅವಕಾಶ ಎಲ್ಲರಿಗೂ ತಕ್ಕುನಾಗಿರುವುದಿಲ್ಲ. ನಿಮ್ಮ ಕಾರ್ಯತಂತ್ರದ ವಿಷಯದಲ್ಲಿ ಬದ್ಧರಾಗಿರಿ, ನೀವು ಮಾಡಿದ ಸಂಶೋಧನೆಯ ಮೇಲೆ ವಿಶ್ವಾಸವಿಡಿ ಮತ್ತು ಮಾರುಕಟ್ಟೆ ನೆಲಕಚ್ಚಿ ಮಕಾಡೆ ಮಲಗಿದರೂ ಶಿಸ್ತಿನ ಗೆರೆಯನ್ನು ದಾಟಬೇಡಿ.

**ಬಾಟಮ್‌ಲೈನ್:** ಹೂಡಿಕೆ ಎನ್ನುವುದು ನಿರಂತರ ಪಯಣ. ಅದು ಏಕಾಏಕಿ ತಲುಪುವ ಗಮ್ಯಸ್ಥಾನವಲ್ಲ. ವಿಚಾರಶೀಲ ನಿರ್ಣಯಗಳನ್ನು ಕೈಗೊಳ್ಳುವುದರಿಂದ ಮತ್ತು ಚತುರತೆಯಿಂದ ಹೂಡಿಕೆ ಮಾಡಲು ಪೂರ್ವಭಾವಿ ಹೆಜ್ಜೆಗಳನ್ನು ಇಡುವುದರಿಂದ 2025ರಲ್ಲಿ ಹಣಕಾಸು ಪ್ರಗತಿಯನ್ನು ಸಾಧಿಸುವುದು ಸುಲಭವಾಗುತ್ತದೆ. ನೆನಪಿಡಿ–ಯಶಸ್ಸಿಗೆ ಇರುವ ದಾರಿ ಎಂದರೆ ಬದ್ಧತೆ, ಶಿಸ್ತು ಮತ್ತು ಮಾರುಕಟ್ಟೆ ಏರಿಳಿತಗಳೇನೇ ಇದ್ದರೂ ದಾಟಿ ಮುಂದೆ ಸಾಗುವ ತಾಳ್ಮೆ. ನಿಮ್ಮ ಹೂಡಿಕೆಯ ದಾರಿ ಸುಗಮವಾಗಿರಲಿ. ಹೊಸ ವರ್ಷ ಮತ್ತು ಅದರ ಹನ್ನೆರಡೂ ತಿಂಗಳು ಪ್ರಗತಿಯ ಏಣಿಯನ್ನೇರಲು ಸಹಕಾರಿಯಾಗಲಿ.

# ಮಾರುಕಟ್ಟೆ ಸಮಯ
## ಚೇಸ್ ಮಾಡುವ ಮುನ್ನ...



**"ಷೇರು ಮಾರುಕಟ್ಟೆಯು ಪ್ರತಿಯೊಂದರ ಬೆಲೆಯನ್ನೂ ಅರಿತಿರುವ ಜನರಿಂದ ತುಂಬಿದೆ. ಆದರೆ ಅವರಿಗೆ ಅದರ ಮೌಲ್ಯದ ಅರಿವಿಲ್ಲ"– ಫಿಲಿಪ್ ಫಿಶರ್**

ಫಿಲಿಪ್ ಫಿಶರ್ ಅವರ ಈ ಮಾತು ಮಾರುಕಟ್ಟೆ ಸಮಯದ ಬಗ್ಗೆ ಇರುವ ಬಹುಮುಖ್ಯ ಗೊಂದಲವನ್ನು ಅನಾವರಣ ಮಾಡುತ್ತದೆ. ಹೂಡಿಕೆದಾರರು ಸಾಮಾನ್ಯವಾಗಿ ಅಲ್ಪಾವಧಿ ಬೆಲೆಯ ಚಲನೆಯನ್ನು ಊಹಿಸುವ ಪ್ರಯತ್ನದಲ್ಲಿ ಸಿಕ್ಕಿಹಾಕಿಕೊಂಡಿರುತ್ತಾರೆ. ಅಂದರೆ ಯಾವಾಗ ಖರೀದಿಸಬೇಕು ಅಥವಾ ಮಾರಾಟಮಾಡಬೇಕು ಎಂಬುದಕ್ಕೆ ಹೆಚ್ಚಿನ ಗಮನ ನೀಡಿರುತ್ತಾರೆ. ಹಾಗೆ ಮಾಡುತ್ತಲೇ ತಮ್ಮ ಹೂಡಿಕೆಯ ನಿಜವಾದ ಮೌಲ್ಯವೇನು ಎಂಬುದನ್ನು ಅರ್ಥ ಮಾಡಿಕೊಳ್ಳುವಲ್ಲಿ ವಿಫಲರಾಗುತ್ತಾರೆ.

**ಮಾರುಕಟ್ಟೆ ಸಮಯ:** ಮಾರುಕಟ್ಟೆಯಲ್ಲಿನ ಅಲ್ಪಾವಧಿ ಚಲನೆಗಳ ಲಾಭ ಪಡೆಯಬಹುದು ಎಂಬ ಉದ್ದೇಶದಿಂದ ಬೆಲೆ ಕುಸಿದಾಗ ಖರೀದಿಸಿ, ಏರಿದಾಗ ಮಾರಾಟ ಮಾಡುವ ಅಭ್ಯಾಸ ಹೊಸದೇನೂ ಅಲ್ಲ. ಇದು ಹೂಡಿಕೆದಾರರನ್ನು ಪ್ರಲೋಭನೆಗೆ ಒಳಪಡಿಸುವ ಕಾರ್ಯತಂತ್ರ. ಆದರೆ ಮಾರುಕಟ್ಟೆ ಪ್ರವೇಶ ಮತ್ತು ನಿರ್ಗಮನಕ್ಕೆ ಸೂಕ್ತ ಸಮಯವನ್ನು ಆಯ್ಕೆ ಮಾಡಿಕೊಳ್ಳುವುದ–ರಿಂದ ನೀವು ಭರಪೂರ ಆದಾಯವನ್ನು ನಿರೀಕ್ಷೆ ಮಾಡಬಹುದು ಎಂಬುದು ಔಚಿತ್ಯಪೂರ್ಣ ಚಿಂತನೆ. ಮಾರುಕಟ್ಟೆಯಲ್ಲಿ ತೀವ್ರತರದ ಏರಿಳಿತಗಳು ಕಂಡುಬಂದಾಗ ನಾವು ಆಕರ್ಷಣೆಗೆ ಒಳಗಾಗುವುದು ಸಹಜ.ಅದಕ್ಕೆ ಇತ್ತೀಚೆಗಷ್ಟೇ ಮುಗಿದ ಮಹಾರಾಷ್ಟ್ರ ಚುನಾವಣೆ ಫಲಿತಾಂಶ ಒಂದು ಉತ್ತಮ ಉದಾಹರಣೆ.

ಇವೆಲ್ಲ ಪ್ರಲೋಭನೆ, ಆಕರ್ಷಣೆಯ ಹೊರತಾಗಿಯೂ 'ಮಾರುಕಟ್ಟೆ ಸಮಯ' ಎನ್ನುವುದು ಅಪಾಯದಿಂದ ತುಂಬಿದೆ ಎಂಬುದು ನಿಶ್ಚಿತ. ಇದು ಬಹಳಷ್ಟು ಹೂಡಿಕೆದಾರರಿಗೆ ಅಪಾಯಕಾರಿ ಕಾರ್ಯತಂತ್ರ ಎಂದು ವ್ಯಾಪಕವಾಗಿ ಪರಿಗಣಿಸಲಾಗಿದೆ.ಮಾರುಕಟ್ಟೆ ಸಮಯವನ್ನು ಪಾಲಿಸಿಕೊಂಡು ಮುಂದಕ್ಕೆ ಸಾಗುವುದು ಕೆಲವೊಮ್ಮೆ ಅತ್ಯಂತ ಕೆಟ್ಟ ನಿರ್ಧಾರವಾಗುತ್ತದೆ.ಅನಗತ್ಯ ಒತ್ತಡಕ್ಕೆ ಒಳಗಾಗಬೇಕಾಗುತ್ತದೆ.ಅಂತಿಮವಾಗಿ ಆದಾಯವೂ ಕಡಿಮೆ.

ಮಾರುಕಟ್ಟೆ ಸಮಯ ಎನ್ನುವುದು ಯಾಕೆ ಅಪಾಯಕಾರಿ ಎಂಬುದನ್ನು ಒಂದೊಂದಾಗಿ ವಿಶ್ಲೇಷಣೆ ಮಾಡುತ್ತೇನೆ, ಗಮನಿಸಿ:


**ನಿಖರತೆಯಿಲ್ಲ:** ಮಾರುಕಟ್ಟೆ ಸಮಯ ಅಪಾಯಕಾರಿ ಎನ್ನುವುದಕ್ಕೆ ಪ್ರಾಥಮಿಕ ಕಾರಣ ಏನೆಂದರೆ ಅಲ್ಪಾವಧಿ ಮಾರುಕಟ್ಟೆ ಚಲನೆಯನ್ನು ಊಹಿಸುವುದು ನಿಜಕ್ಕೂ ಕಷ್ಟದ ಕೆಲಸ. ವ್ಯಾಪಕವಾದ ಸಂಪನ್ಮೂಲಗಳು ಹಾಗೂ ಅತ್ಯಾಧುನಿಕ ಸಾಧನಗಳನ್ನು ಹೊಂದಿರುವ ವೃತ್ತಿಪರ ವಹಿವಾಟುದಾರರು ಮತ್ತು ಸಾಂಸ್ಥಿಕ ಹೂಡಿಕೆದಾರರು ಕೂಡ ಮಾರುಕಟ್ಟೆ ಎತ್ತ ವಾಲುತ್ತಿದೆ ಎಂಬುದನ್ನು ಕರಾರುವಕ್ಕಾಗಿ ಹೇಳಲು ಸಾಧ್ಯವಿಲ್ಲ. ಷೇರು ಮಾರುಕಟ್ಟೆಯ ಮೇಲೆ ಪ್ರಭಾವ ಬೀರುವ ಹತ್ತಾರು ಅಂಶಗಳಿರುತ್ತವೆ–

ಆರ್ಥಿಕ ಸೂಚನೆಗಳು, ಭೌಗೋಳಿಕ-ರಾಜಕೀಯ ಘಟನೆಗಳು, ಬಡ್ಡಿ ದರಗಳು, ಗಳಿಕೆಯ ವರದಿಗಳು ಮತ್ತು ಹೂಡಿಕೆದಾರರ ಮನಸ್ಥಿತಿಗಳು ಇದರಲ್ಲಿ ಸೇರಿವೆ. ಇಷ್ಟಾದರೂ ನಿರ್ದಿಷ್ಟವಾಗಿ ಭವಿಷ್ಯ ನುಡಿಯಲು ಸಾಧ್ಯವಿಲ್ಲ. ಇಂತಹ ಚಲನೆಗಳನ್ನು ಊಹಿಸುವ ಪ್ರಯತ್ನ ಮಾಡಿದರೆ ನಿಜಕ್ಕೂ ಜೂಜಾಟದಂತೆ. ಅದೇನಾದರೂ ತಪ್ಪಾಯಿತೆಂದರೆ ಬಹಳ ದೊಡ್ಡ ನಷ್ಟದ ಸುಳಿಯಲ್ಲಿ ನೀವು ಸಿಕ್ಕಿಹಾಕಿಕೊಳ್ಳುತ್ತೀರಿ.

**ಅವಕಾಶದ ಬೆಲೆ:** ಹೂಡಿಕೆ ಮಾಡಲು ‘ಸೂಕ್ತ ಸಮಯ’ಕ್ಕಾಗಿ ಕಾಯುವ ಹೂಡಿಕೆದಾರರು ಕೊನೆಗೆ ಅಂತಹ ಸಮಯ ಬಾರದೇ ಅಮೂಲ್ಯ ಅವಕಾಶಗಳನ್ನು ಕಳೆದುಕೊಳ್ಳುವ ಸಾಧ್ಯತೆಯೇ ಹೆಚ್ಚು. ಮಾರುಕಟ್ಟೆಯ ಪರಿಪೂರ್ಣ ಸಮಯಕ್ಕಾಗಿ ಪ್ರಯತ್ನ ನಡೆಸುವವರು ಯಾವುದೇ ನಿರ್ಧಾರ ಕೈಗೊಳ್ಳಲು ಸಾಧ್ಯವಾಗದೇ ಇರಬಹುದು.ಈ ಮಧ್ಯೆ ಹಣದುಬ್ಬರ ಮತ್ತು ನೀವು ಕೈಬಿಟ್ಟ ಹೂಡಿಕೆ ಅವಕಾಶಗಳು ನಿಮ್ಮ ಹಣದ ಖರೀದಿ ಶಕ್ತಿಯನ್ನು ಕುಗ್ಗಿಸಿರುತ್ತದೆ. ಮುಂದೊಂದು ದಿನ ಮಾರುಕಟ್ಟೆ ಪ್ರವೇಶಕ್ಕೆ ಸುಮೂಹೂರ್ತ ದೊರೆಯುವ ಆಸೆಗಣ್ಣಿನಿಂದ ಕಾಯುತ್ತ ಹೂಡಿಕೆಯನ್ನು ಮುಂದೂಡುವುದರಿಂದ ಮಾರುಕಟ್ಟೆಯಲ್ಲಿ ಗೂಳಿ ಕುಣಿತದ ಸಂದರ್ಭದಲ್ಲಿ ಗಳಿಸಬಹುದಾದ ಆದಾಯದಿಂದ ವಂಚಿತರಾಗಬೇಕಾಗುತ್ತದೆ.

**ಭಾವನಾತ್ಮಕ ನಿರ್ಧಾರ:** ಮಾರುಕಟ್ಟೆ ಸಮಯವು ಕೆಲವೊಮ್ಮೆ ಭಯ ಮತ್ತು ದುರಾಸೆಯಂತಹ ಭಾವನಾತ್ಮಕ ಅಂಶಗಳ ಹಿಡಿತಕ್ಕೆ ಸಿಕ್ಕಿರುತ್ತದೆ. ಷೇರುಪೇಟೆಯಲ್ಲಿ ತೀವ್ರ ಏರಿಳಿತವಿದ್ದಾಗ ಹೂಡಿಕೆದಾರರು ಇನ್ನಷ್ಟು ನಷ್ಟದ ಭೀತಿಯಲ್ಲಿ ಮಾರಾಟ ಮಾಡಲು ಮುಂದಾಗಬಹುದು.ಅದೇ ರೀತಿ ತೀವ್ರ ಏರಿಕೆ ಉಂಟಾದಾಗ ಇನ್ನಷ್ಟು ಲಾಭ ಮಾಡಿಕೊಳ್ಳುವುದು ಕೈತಪ್ಪಿಹೋಗುತ್ತದೆ ಎಂಬ ಕಾರಣಕ್ಕೆ ಖರೀದಿ ಶುರುಮಾಡಿಕೊಳ್ಳಬಹುದು. ಇಂತಹ ಭಾವನಾತ್ಮಕ ನಿರ್ಧಾರಗಳಿಂದ ಹೂಡಿಕೆಯಲ್ಲಿ ಲಾಭ ಮಾಡಲು ಸಾಧ್ಯವಿರುವುದಿಲ್ಲ. ಮಾರುಕಟ್ಟೆಯಲ್ಲಿನ ಅಲ್ಪಾವಧಿ ಏರಿಳಿತಕ್ಕೆ ಸ್ಪಂದಿಸುವುದರಿಂದ ಅಧಿಕ ಷೇರುಗಳ ಖರೀದಿಗೆ ಕಾರಣವಾಗಬಹುದು ಮತ್ತು ಅದಕ್ಕೆ ವಿರುದ್ಧವಾಗಿ ಕಡಿಮೆ ಬೆಲೆಗೆ ಮಾರಾಟಮಾಡಬಹುದು.

**ವಹಿವಾಟಿನ ಬೆಲೆ:** ಮಾರುಕಟ್ಟೆ ಸಮಯಕ್ಕೆ ಪೈಪೋಟಿ ನಡೆಸುವ ರೀತಿಯಲ್ಲಿ ನಿರಂತರವಾಗಿ ಆಸ್ತಿ ಖರೀದಿ ಮತ್ತು ಮಾರಾಟದಲ್ಲಿ ತೊಡಗುವುದರಿಂದ ಅಧಿಕ ವಹಿವಾಟು ವೆಚ್ಚವನ್ನು ಭರಿಸಬೇಕಾಗುತ್ತದೆ. ಬ್ರೋಕರ್ ಶುಲ್ಕ, ಕಮಿಷನ್ ಮತ್ತು ಬಂಡವಾಳ




ಗಳಿಕೆಯ ಮೇಲೆ ತೆರಿಗೆಯಂತಹ ವೆಚ್ಚಗಳಿಂದ ಸಂಭವನೀಯ ಲಾಭ ಕರಗಿಹೋಗಬಹುದು. ದೀರ್ಘಾವಧಿ ಹೂಡಿಕೆ ಮಾಡುವುದರಿಂದ ಇಂತಹ ವೆಚ್ಚಗಳನ್ನು ತಗ್ಗಿಸಲು ಸಾಧ್ಯವಿದೆ. ಯಾಕೆಂದರೆ ನೀವು ಖರೀದಿ ಮತ್ತು ಹೂಡಿಕೆಯನ್ನು ಹಿಡಿದಿಟ್ಟುಕೊಳ್ಳುವ ಕೆಲಸವನ್ನು ವರ್ಷಗಳಿಗೊಮ್ಮೆ ಅಥವಾ ದಶಕಗಳಿಗೊಮ್ಮೆ ಮಾಡಿರುತ್ತೀರಿ. ಅದಕ್ಕೆ ಬದಲಾಗಿ ಕಾಲಕಾಲಕ್ಕೆ ಟ್ರೇಡಿಂಗ್ ಮಾಡುತ್ತ ಸಕ್ರಿಯವಾಗಿರಲು ಪ್ರಯತ್ನ ಮಾಡಿದರೆ ಅಧಿಕ ವೆಚ್ಚಗಳನ್ನು ಭರಿಸುತ್ತ ಬರುವ ಆದಾಯದಲ್ಲಿ ಖೋತಾ ಉಂಟಾಗಬಹುದು.

**ಅತಿಯಾದ ವಿಶ್ವಾಸದ ಅಪಾಯ:** ತಾವು ಮಾಡಿರುವ ಸಂಶೋಧನೆ ಮತ್ತು ಒಳಮನಸ್ಸಿನ ಯೋಚನೆಗೆ ತಕ್ಕಂತೆ ಮಾರುಕಟ್ಟೆಯ ಸಮಯಕ್ಕೆ ಅನುಗುಣವಾಗಿ ಯಶಸ್ವಿಯಾಗಿ ಹೂಡಿಕೆ ಮಾಡಬಹುದು ಎಂಬುದು ಅನೇಕ ಹೂಡಿಕೆದಾರರ ನಂಬಿಕೆಯಾಗಿರುತ್ತದೆ. ಆದರೆ ಮಾರುಕಟ್ಟೆ ಹೀಗೇ ಎಂದು ನಿರೀಕ್ಷೆ ಮಾಡಲು ಸಾಧ್ಯವೇ ಇಲ್ಲ. ಅದು ಅದರ ಹುಟ್ಟುಗುಣ. ಹಾಗಾಗಿ ಅತಿಯಾದ ವಿಶ್ವಾಸ ನಮ್ಮ ಕಳಪೆ ನಿರ್ಧಾರಕ್ಕೆ ದಾರಿಮಾಡಿಕೊಡಬಹುದು. ಷೇರುಮಾರುಕಟ್ಟೆಯ ಇತಿಹಾಸದಲ್ಲಿ ಇಂತಹ ಹೂಡಿಕೆದಾರರೇ ತುಂಬಿಹೋಗಿದ್ದಾರೆ. ಮಾರುಕಟ್ಟೆ ಸಮಯದ ವಿಚಾರದಲ್ಲಿ ಅತಿಯಾದ ವಿಶ್ವಾಸ ಯಾವತ್ತೂ ಅಪಾಯಕ್ಕೆ ಮುಖಮಾಡಿದಂತೆ.

ಇದಕ್ಕೆ ಪಕ್ಕಾ ಉದಾಹರಣೆ ಎಂದರೆ ಕೋವಿಡ್ ಕಾಲಾವಧಿ. 2020ರ ಫೆಬ್ರುವರಿ ಮತ್ತು ಮಾರ್ಚ್ ಅವಧಿಯಲ್ಲಿ ಮಾರುಕಟ್ಟೆ ನೆಲಕಚ್ಚಿದಾಗ ಅವಸರಪಟ್ಟ ಹೂಡಿಕೆದಾರರಿಗೆ ಲೆಕ್ಕವಿಲ್ಲ. ಹಾಗೆ ಅವಸರಪಟ್ಟವರೆಲ್ಲ ಮುಂದೆ ಷೇರುಪೇಟೆ ತಲೆಎತ್ತಿ ನಿಂತಾಗ ಕೈಕೈ ಹಿಸುಕಿಕೊಂಡಿದ್ದಾರೆ. ಹೀಗೆ ಮಾರುಕಟ್ಟೆ ಮಕಾಡೆ ಮಲಗಿದ ಉದಾಹರಣೆಗಳು ಸಾಕಷ್ಟು ನಮ್ಮ ಮುಂದೆ ಇವೆ.ಹಾಗೆ ಅಚ್ಚರಿಪಡುವಂತೆ ಚೇತರಿಸಿಕೊಂಡ ಉದಾಹರಣೆಗಳು ಕೂಡ. ಇಂತಹ ಏರಿಳಿತಗಳು ಮಾರುಕಟ್ಟೆ ಸಮಯದ ನಾಡಿಮಿಡಿತ ಅರಿತಿದ್ದೇವೆ ಎಂದು ಬೀಗುವವರ ಕನಸನ್ನೂ ಛಿದ್ರಮಾಡಿದೆ.

ಈಗಂತೂ ಡಿಜಿಟಲ್ ಯುಗ. ಕ್ಷಣಕ್ಷಣಕ್ಕೂ ಮಾಹಿತಿಗಳ ಪ್ರವಾಹ. ಮಾರುಕಟ್ಟೆ ಅದಕ್ಕೆ ಸ್ಪಂದಿಸುತ್ತ ಉಲ್ಟಾ-ಪುಲ್ಟಾ ಆಗಿರುತ್ತದೆ. ಆದರೆ ಅಂತಹುದೊಂದು ಟ್ರೆಂಡ್‌ನ್ನು ನೀವು ಗುರುತಿಸುವ ಹೊತ್ತಿಗೆ ಷೇರುಪೇಟೆ ಮತ್ತೆ ಪುಟಿದು ಮೇಲೆ ಬಂದಿರುತ್ತದೆ. ಇಂತಹ ‘ಮಾಯಾ ಜಿಂಕೆ’ಯನ್ನು ಬೆನ್ನಟ್ಟಿ ಹೋಗುವ ಪ್ರಯತ್ನ ಮಾಡಿದವರು ಅತ್ಯಂತ ಅಧಿಕ ಬೆಲೆಯಲ್ಲಿ ಷೇರುಗಳ ಖರೀದಿ ಮಾಡಿರುತ್ತಾರೆ ಮತ್ತು ತಮ್ಮ ಉದ್ದೇಶಕ್ಕೆ ಸಂಪೂರ್ಣ ವಿರುದ್ಧವಾದ ಬೆಲೆಗೆ ಮಾರಾಟ ಮಾಡಿರುತ್ತಾರೆ.

ಹಾಗಾಗಿ ಸದಾ ತೂಗಾಡುವ ಉಯ್ಯಾಲೆಯಲ್ಲಿ ಕುಳಿತುಕೊಳ್ಳುವ ಪ್ರಯತ್ನ ಮಾಡುವ ಬದಲಿಗೆ ಹೂಡಿಕೆದಾರರು ಈಗಾಗಲೇ ಮಾರುಕಟ್ಟೆಯಲ್ಲಿ ಸಾಬೀತಾಗಿರುವ ದೀರ್ಘಾವಧಿ ಹೂಡಿಕೆ ಸಿದ್ಧಾಂತ ಕಡೆಗೆ ಗಮನ ಹರಿಸುವುದು ಉತ್ತಮ.

**ಶಿಸ್ತು-ದೀರ್ಘಾವಧಿ ಹೂಡಿಕೆ ವಿಧಾನ:** ಅರ್ಥ ವ್ಯವಸ್ಥೆ ಚೈತನ್ಯಶೀಲವಾಗಿದ್ದು ಕಂಪನಿಗಳು ಹೊಸತನಗಳಿಗೆ ಮುಖಮಾಡಿರುವ ಕಾರಣ ಸುದೀರ್ಘಾವಧಿಯಿಂದ ಮಾರುಕಟ್ಟೆ ಏರುಗತಿಯಲ್ಲಿ ಸಾಗಿದೆ. ದೀರ್ಘಾವಧಿ ಹೂಡಿಕೆಯ ಮೇಲೆ ಗಮನ ಹರಿಸುತ್ತ ಖರೀದಿಸಿ ಕಾಯ್ದಿಟ್ಟುಕೊಳ್ಳುವ ಕಾರ್ಯತಂತ್ರ ಅಳವಡಿಸಿಕೊಳ್ಳುವುದರಿಂದ ಅಲ್ಪಾವಧಿಯ ಏರಿಳಿತಗಳ ಬಗ್ಗೆ ಹೂಡಿಕೆದಾರರು ತಲೆಕೆಡಿಸಿಕೊಳ್ಳುವ ಅಗತ್ಯವಿರುವುದಿಲ್ಲ. ಇಂತಹ ವಿಧಾನ ಸಾಮಾನ್ಯವಾಗಿ ಒತ್ತಡರಹಿತವಾಗಿರುತ್ತದೆ ಮತ್ತು ಹೂಡಿಕೆದಾರರು ಮಾರುಕಟ್ಟೆಯ ಗದ್ದಲಗಳ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೇ ತಮ್ಮ ಹಣಕಾಸು ಅಗತ್ಯಗಳ ಬಗ್ಗೆ ಹೆಚ್ಚು ಗಮನ ಹ-

ರಿಸಬಹುದು.

**ಮ್ಯುಚ್ಯುಯಲ್ ಫಂಡ್‌ಗಳಲ್ಲಿ ಎಸ್‌ಐಪಿ:** ಷೇರುಪೇಟೆಯ ಸ್ಥಿತಿಗತಿಗಳು ಏನೇ ಇದ್ದರೂ ಆಗಾಗ ನಿರ್ದಿಷ್ಟವಾದ ಮೊತ್ತವನ್ನು ಹೂಡಿಕೆ ಮಾಡುವುದು ಇದರ ವಿಧಾನ. ನಿಮ್ಮ ಖರೀದಿ ಬೆಲೆಯನ್ನು ಸರಾಸರಿಗೊಳಿಸಲು ಮತ್ತು ಬೆಲೆ ಕಡಿಮೆ ಇದ್ದಾಗ ಹೆಚ್ಚು ಯೂನಿಟ್‌ಗಳನ್ನು ಖರೀದಿ ಮಾಡಲು ಹಾಗೂ ಹೆಚ್ಚಿದ್ದಾಗ ಕಡಿಮೆ ಖರೀದಿ ಮಾಡಲು ಎಸ್‌ಐಪಿ ಸಹಾಯ ಮಾಡುತ್ತದೆ. ಈ ಕಾರ್ಯತಂತ್ರದಿಂದ ಮಾರುಕಟ್ಟೆ ಏರಿಳಿತದ ಲಾಭ ಪಡೆದುಕೊಳ್ಳಬಹುದು ಮತ್ತು ಮಾರುಕಟ್ಟೆಯ ಸಮಯದ ಬಗ್ಗೆ ತಲೆಕೆಡಿಸಿಕೊಳ್ಳಬೇಕಾಗಿಲ್ಲ.

**ಬಂಡವಾಳ ವಿತರಣೆ:** ಮಾರುಕಟ್ಟೆಯ ಸಮಯದ ಬಗ್ಗೆ ಪ್ರಯತ್ನಪಡುವ ಬದಲಾಗಿ ನಿಮ್ಮ ಹೂಡಿಕೆಯ ಅವಶ್ಯಕತೆಗೆ ಹೆಚ್ಚು ಲಗತ್ತಾಗುವ ಹಾಗೂ ಅಪಾಯವನ್ನು ಸಹಿಕೊಳ್ಳುವ ಬಂಡವಾಳ ವೈವಿಧ್ಯತೆಯನ್ನು ಹೊಂದಿರುವ ಪೋರ್ಟ್‌ಫೋಲಿಯೊವನ್ನು ರೂಪಿಸುವ ಬಗ್ಗೆ ಗಮನ ಹರಿಸುವುದು ಉತ್ತಮ. "ಮುಂದಿನ ಹತ್ತು ವರ್ಷಗಳಲ್ಲಿ ತಮ್ಮ ಕಂಪನಿಗಳು ಏನನ್ನು ಸಾಧಿಸಲಿವೆ ಎಂಬುದನ್ನು ಯೋಚಿಸುವುದಕ್ಕೆ ಬದಲಾಗಿ ಮುಂದಿನ ತಿಂಗಳು ಮಾರುಕಟ್ಟೆಯಲ್ಲಿ ಏನು ಸಂಭವಿಸಲಿದೆ ಎಂದು ಚಿಂತಿಸುತ್ತ ಹಣವನ್ನು ಕಳೆದುಕೊಂಡ ಹೂಡಿಕೆದಾರರೇ ಅಧಿಕ" ಎನ್ನುವ ವಾರೆನ್ ಬಫೆಟ್ ಮಾತು ಈ ಸಂದರ್ಭದಲ್ಲಿ ಅರ್ಥಪೂರ್ಣ ಅನಿಸುತ್ತದೆ.

ಇಂದಿನ ಮಾರುಕಟ್ಟೆಯ ಏರಿಳಿತಗಳಿಗೆ ಈ ಮಾತು ಹೆಚ್ಚು ಸೂಕ್ತವಾಗಿದೆ. 'ಯಾವಾಗ ನಾನು ಖರೀದಿ ಅಥವಾ ಮಾರಾಟ ಮಾಡಬೇಕು?' ಎಂಬ ಪ್ರಶ್ನೆಗಿಂತ 'ನಾನು ನನ್ನ ದೀರ್ಘಾವಧಿ ಅಗತ್ಯಗಳಿಗೆ ತಕ್ಕಂತೆ ಹೂಡಿಕೆ ಮಾಡುತ್ತಿದ್ದೇನೆಯೇ?' ಎನ್ನುವುದು ಮುಖ್ಯವಾಗಬೇಕು.

**ಬಾಟಮ್‌ಲೈನ್:** ಬಹಳಷ್ಟು ಹೂಡಿಕೆದಾರರಿಗೆ ಮಾರುಕಟ್ಟೆಯ ಅಸ್ಥಿರತೆಯನ್ನು ನಿಭಾಯಿಸಲು ಇರುವ ಸೂತ್ರವೆಂದರೆ ಮಾರುಕಟ್ಟೆಯ ಸಮಯವನ್ನು ನೋಡುವುದಲ್ಲ, ಬದಲಾಗಿ ಮಾರುಕಟ್ಟೆಗಾಗಿ ಸಮಯವನ್ನು ಕೊಡುವುದು. ನಿಮ್ಮ ಹೂಡಿಕೆ ವ್ಯಾಪ್ತಿಯು ಅಲ್ಪಾವಧಿ ಮಾರುಕಟ್ಟೆ ಅಸ್ಥಿರತೆಯನ್ನು ಮೀರಿದ್ದಾಗಿರಬೇಕು. ಅಂತಹ ಕಾರ್ಯತಂತ್ರವನ್ನು ನೀವು ರೂಪಿಸಬೇಕು.ಅಂತಿಮವಾಗಿ, ಮಾರುಕಟ್ಟೆಯ ಏರಿಳಿತಗಳು ಎಷ್ಟೇ ಪ್ರಲೋಭನೆ ಹುಟ್ಟಿಸಿದರೂ ಮಾರುಕಟ್ಟೆಯಲ್ಲಿನ ಸಮಯವು ಮಾರುಕಟ್ಟೆ ಸಮಯವನ್ನು ಮೀರಿಸುತ್ತದೆ.



# ನಿಶ್ಚಿಂತೆಯ ಚಾಲನೆಗೆ ಬೇಕು ಮೋಟಾರ್ ವಿಮೆ

ನೀವು ಡ್ರೈವ್ ಮಾಡುತ್ತಿದ್ದೀರಿ ಅಂದರೆ ಅಲ್ಲೊಂದು ರಿಸ್ಕ್ ಇದ್ದೇ ಇದೆ ಎಂದು ಅರ್ಥ. ಅದು ಸಣ್ಣ ಪ್ರಮಾಣದ್ದಿರಬಹುದು ಅಥವಾ ದೊಡ್ಡ ದುರಂತವೇ ಆಗಿರಬಹುದು ಮತ್ತು ಯಾವಾಗ ಬೇಕಿದ್ದರೂ ಸಂಭವಿಸಬಹುದು. ಅಪಘಾತಗಳು ನಿಮ್ಮ ಮೇಲೆ ಭಾರೀ ದೊಡ್ಡ ಹಣಕಾಸಿನ ಹೊರೆಯನ್ನು ತಂದೊಡ್ಡುತ್ತದೆ. ಅದರಲ್ಲಿ ವಾಹನ ದುರಸ್ಥಿ ಮತ್ತು ಕಾನೂನು ಭಾದ್ಯತೆಗಳು ಕೂಡ ಸೇರಿವೆ. ಅಪಘಾತ ಎನ್ನುವುದು ಆಕಸ್ಮಿಕ. ಅದು ಯಾವಾಗ ಸಂಭವಿಸುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಇಂತಹ ಸಂದರ್ಭದಲ್ಲಿ ನಿಮ್ಮ ಕೈಯಲ್ಲೊಂದು ಮೋಟಾರ್ ಇನ್ಸುರೆನ್ಸ್ ಇದ್ದುಬಿಟ್ಟರೆ ಅದು ಸುರಕ್ಷತೆಯನ್ನು ಒದಗಿಸುತ್ತದೆ. ಕಣ್ಣಿಗೆ ಕಾಣದ ಘಟನೆಗಳ ವಿಚಾರದಲ್ಲಿ ಹಣಕಾಸು ರಕ್ಷಣೆಯನ್ನು ನೀಡುತ್ತದೆ.

ಈ ಲೇಖನದಲ್ಲಿ ಮೋಟಾರ್ ವಿಮೆಯಲ್ಲಿರುವ ಸಂಕೀರ್ಣತೆಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಲಾಗುವುದು. ಜೊತೆಗೆ ಅದರ ಮಹತ್ವ, ಅದರಿಂದ ಲಭ್ಯವಾಗುವ ನಾನಾ ಸೌಲಭ್ಯಗಳು ಮತ್ತು ನಿಮ್ಮ ಅಗತ್ಯಗಳು ಹಾಗೂ ಬಜೆಟ್‌ಗೆ ತಕ್ಕಂತೆ ಸೂಕ್ತ ಪಾಲಿಸಿಗಳನ್ನು ಆಯ್ಕೆಮಾಡಿಕೊಳ್ಳುವುದು ಹೇಗೆ ಎನ್ನುವ ಬಗ್ಗೆ ಮಾಹಿತಿ ನೀಡಲಾಗುತ್ತದೆ.

**ಮೋಟಾರ್ ವಿಮೆ ಎಂದರೇನು?:** ವಾಹನದಿಂದಾಗಿ ಹಣಕಾಸು ನಷ್ಟ ಸಂಭವಿಸಿದರೆ ಆ ವಾಹನದ ಮಾಲೀಕರಿಗೆ ರಕ್ಷಣೆಯನ್ನು ನೀಡುವುದೇ ಮೋಟಾರ್ ವಿಮೆ. ಈ ಕೆಳಗಿನ ವಿಷಯದಲ್ಲಿ ವಾಹನದ ಮಾಲೀಕರಿಗೆ ಹಣಕಾಸು ನಷ್ಟ ಸಂಭವಿಸಬಹುದು:

- ಆತ/ಆಕೆಯ ವಾಹನಕ್ಕೆ ನೈಸರ್ಗಿಕ ವಿಕೋಪದಿಂದ ಮತ್ತು ಮಾನವ ನಿರ್ಮಿತ ವಿಕೋಪದಿಂದ ಹಾನಿ ಸಂಭವಿಸಿದರೆ ಅಥವಾ
- ಯಾವುದೇ ರೀತಿಯ ಮೂರನೇ ಪಕ್ಷದ ಭಾದ್ಯತೆಗೆ ಆತ/ಆಕೆ ಪಾವತಿ ಮಾಡಬೇಕಾಗುತ್ತದೆ.

ಮಾಲೀಕನು ತನ್ನ ವಾಹನವನ್ನು ಬಳಕೆ ಮಾಡಿದ್ದರಿಂದ ಮೂರನೇ ಪಕ್ಷದವರಿಗೆ ಯಾವುದೇ ಗಾಯ ಅಥವಾ ಹಾನಿ ಸಂಭವಿಸಿದ್ದರೆ ಮಾಲೀಕನು ಕಾನೂನುಬದ್ಧವಾಗಿ ಅದರ ಹಣವನ್ನು ಪಾವತಿ ಮಾಡಬೇಕು. ಭಾರತದಲ್ಲಿ ಮೂರನೇ ಪಕ್ಷದ ವಿಮೆ ಪಾಲಿಸಿ ಮಾಡುವುದು ಕಡ್ಡಾಯವಾಗಿದೆ.

1988ರ ಭಾರತೀಯ ಮೋಟಾರ್ ವಾಹನ ಕಾಯ್ದೆಯ ಪ್ರಕಾರ ಸೂಕ್ತ ವಿಮೆಯನ್ನು ಹೊಂದಿಲ್ಲದ ವಾಹನವನ್ನು ಚಾಲನೆ ಮಾಡುವುದು ಶಿಕ್ಷಾರ್ಹ ಅಪರಾಧವಾಗಿದೆ.

**ವಾಹನಗಳಲ್ಲಿನ ವಿಧಗಳು: ಖಾಸಗಿ ಕಾರುಗಳು:** ಇವುಗಳಲ್ಲಿ ಸೆಡಾನ್, ಹ್ಯಾಚ್‌ಬ್ಯಾಕ್, ಎಸ್‌ಯುವಿ ಮತ್ತು ವೈಯಕ್ತಿಕ ಉದ್ದೇಶಗಳಿಗೆ ಬಳಸುವ ಇತರ ವಾಹನಗಳು.

**ದ್ವಿಚಕ್ರ ವಾಹನಗಳು:** ಇವುಗಳಲ್ಲಿ ಮೋಟಾರ್ ಸೈಕಲ್‌ಗಳು, ಸ್ಕೂಟರ್‌ಗಳು ಮತ್ತು ಮೊಪೆಡ್‌ಗಳು ಸೇರಿವೆ.

**ವಾಣಿಜ್ಯ ವಾಹನಗಳು:** ಈ ವಿಭಾಗವು ವಿಶಾಲವಾಗಿದ್ದು ಇವುಗಳಲ್ಲಿ ಲಾರಿ, ಬಸ್, ಟ್ಯಾಕ್ಸಿ ಇತ್ಯಾದಿ ಸೇರಿವೆ.

ಮೋಟಾರ್ ವಿಮೆಯಲ್ಲಿನ ವಿಧಗಳು: ಭಾದ್ಯತೆ ಮಾತ್ರ ಇರುವ ಪಾಲಿಸಿಗಳು–ಇವುಗಳನ್ನು ಥರ್ಡ್ ಪಾರ್ಟಿ

ವಿಮೆ ಎಂದು ಕರೆಯುತ್ತಾರೆ. ಇದರಲ್ಲಿ ಇರುವ ಸೌಲಭ್ಯಗಳು:

**ಥರ್ಡ್-ಪಾರ್ಟಿ ದೈಹಿಕವಾಗಿ ಆಗುವ ಗಾಯಗಳು ಮತ್ತು ಅಥವಾ ಅಪಘಾತದಿಂದ ಸಂಭವಿಸುವ ಸಾವು:** ನಿಮ್ಮ ವಾಹನದಿಂದ ಉಂಟಾದ ಅಪಘಾತದಿಂದಾಗಿ ಯಾವುದೇ ಗಾಯ ಅಥವಾ ಸಾವು ಸಂಭವಿಸಿದರೆ ಈ ಪಾಲಿಸಿಯಲ್ಲಿ ಹಣಕಾಸು ಭದ್ರತೆಯನ್ನು ಕಲ್ಪಿಸಲಾಗುತ್ತದೆ.

**ಥರ್ಡ್ ಪಾರ್ಟಿ ಆಸ್ತಿ ಹಾನಿ:** ನಿಮ್ಮ ವಾಹನದ ಅಪಘಾತದಿಂದ ಇತರರ ವಾಹನ, ಕಟ್ಟಡ ಮುಂತಾದ ಆಸ್ತಿಗಳಿಗೆ ಹಾನಿ ಸಂಭವಿಸಿದರೆ ಹಣ-ಕಾಸು ಭದ್ರತೆ ಒದಗಿಸಲಾಗುತ್ತದೆ.

ಸಮಗ್ರ ಪಾಲಿಸಿಗಳು ನಿಮ್ಮ ವಾಹನಕ್ಕೆ ಅಗತ್ಯವಿರುವ ಎಲ್ಲ ಸೌಲಭ್ಯಗಳನ್ನು ಕಲ್ಪಿಸಿಕೊಡುತ್ತವೆ. ಇದರಲ್ಲಿ ಕಡ್ಡಾಯವಾಗಿ ಥರ್ಡ್ ಪಾರ್ಟಿ ಕವರೇಜ್ ಹಾಗೂ ಸ್ವಂತ ವಾಹನಕ್ಕೆ ಆಗುವ ಹಾನಿಯನ್ನೂ ತುಂಬಿಕೊಡಲಾಗುತ್ತದೆ. ಥರ್ಡ್ ಪಾರ್ಟಿ ಬಾಧ್ಯತೆಯ ಜೊತೆಗೆ ಈ ಕೆಳಗಿನ ಅಂಶಗಳು ಕೂಡ ಒಳಗೊಂಡಿರುತ್ತವೆ:

1. ಅಪಘಾತ, ಗಲಭೆ, ಮುಷ್ಕರ, ದುರುದ್ದೇಶಪೂರಿತ ಕೃತ್ಯಗಳು, ಭೂಕಂಪ, ಪ್ರವಾಹ, ಬಿರುಗಾಳಿ, ಬೆಂಕಿ, ಭಯೋತ್ಪಾದನೆ, ಸಿಡಿಲು, ಸ್ಫೋಟ, ದರೋಡೆ, ಕಳ್ಳತನ, ಬಂಡೆ/ಭೂಕುಸಿತ ಇತ್ಯಾದಿಗಳಿಂದ ವಾಹನಕ್ಕೆ ಸಂಭವಿಸಿದ ಹಾನಿ ಅಥವಾ ನಷ್ಟ.
2. ವೈಯಕ್ತಿಕ ಅಪಘಾತದಲ್ಲಿ ಮಾಲೀಕರು ಅಥ-ವಾ ಚಾಲಕರಿಗೆ ಕವರೇಜ್ ಮತ್ತು ಇತರ ಹೆಚ್ಚುವರಿ ಸೌಲಭ್ಯಗಳು (ಶೂನ್ಯ ಸವಕಳಿ/ರಸ್ತೆಬದಿಯ ಸಹಾಯ ಇತ್ಯಾದಿ)

1.ವಾಹನದ ಕಳ್ಳತನ ಇತ್ಯಾದಿ

ಸಮಗ್ರ ವಿಮಾ ಪಾಲಿಸಿಯಲ್ಲಿ ಈ ಕೆಳಗಿನ ಅಂಶಗಳು ಒಳಗೊಂಡಿರುವುದಿಲ್ಲ

- **ಯಾಂತ್ರಿಕವಾಗಿ ಅಥವಾ ಎಲೆಕ್ಟ್ರಿಕಲ್ ಕಾರಣದಿಂದ ಉಂಟಾದ ಹಾನಿ**
- **ಮದ್ಯ, ಮಾದಕ ದ್ರವ್ಯ ಮತ್ತು ಇನ್ನಿತರ ಯಾವುದೇ ಮತ್ತು ಭರಿಸುವ ವಸ್ತುಗಳ ಪ್ರಭಾವಕ್ಕೆ ಒಳಗಾದ ವ್ಯಕ್ತಿಯಿಂದ ಉಂಟಾದ ಹಾನಿ.**
- ಸೂಕ್ತ ಚಾಲನಾ ಪರವಾನಗಿ ಇಲ್ಲದೆ ವಾಹನ ಚಾಲನೆ ಮಾಡಿದ ವ್ಯಕ್ತಿಯಿಂದ ಉಂಟಾದ ಹಾನಿ.
- **ಭಾರತದ ಹೊರಗೆ ಉಂಟಾದ ನಷ್ಟ ಅಥವಾ ಹಾನಿ**
- ಕಾನೂನುಬಾಹಿರ ಉದ್ದೇಶಕ್ಕಾಗಿ ಬಳಸಿದ ವಾಹನದಿಂದ ಉಂಟಾದ ಹಾನಿ

**ಮೋಟಾರ್ ವಿಮೆಯಲ್ಲಿರುವ ಇತರ ಮಹತ್ವದ ಅಂಶಗಳು:ವಿಮೆಗೆ ಒಳಪಡಿಸಿದ ಘೋಷಿತ ಮೌಲ್ಯ (ಐಡಿವಿ)** ಕಳ್ಳತನ ಅಥವಾ ಒಟ್ಟು ಹಾನಿ ಸಂಭವಿಸಿದ ಸಂದರ್ಭದಲ್ಲಿ ವಿಮಾದಾರರಿಂದ ನೀಡಲಾಗುವ ಗರಿಷ್ಠ ಮೊಬಲಗು. ಐಡಿವಿಯನ್ನು ವಾಹನದ ಪ್ರಸಕ್ತ ಮಾರುಕಟ್ಟೆ ಮೌಲ್ಯ ಎಂದು ಕೂಡ ಕರೆಯಬಹುದಾಗಿದೆ. ವಾಹನಕ್ಕೆ ಸಂಪೂರ್ಣ ನಷ್ಟ ಉಂಟಾದರೆ ಪಾಲಿಸಿದಾರರಿಗೆ ವಿಮಾದಾರರು ನೀಡುವ ಪರಿಹಾರ ಮೊತ್ತವನ್ನು ಐಡಿವಿ ಎನ್ನುತ್ತೇವೆ.

**ಕ್ಯೂಬಿಕ್ ಸಾಮರ್ಥ್ಯ (ಸಿಸಿ):** ಒಂದು ವಾಹನದ ಎಂಜಿನ್‌ನ ಗಾತ್ರದ ಅಳತೆಯನ್ನು ಕ್ಯೂಬಿಕ್ ಸಾಮರ್ಥ್ಯ ಅಥವಾ ಸಿಸಿ ಎಂದು ಕರೆಯುತ್ತೇವೆ. ಸಾಮಾನ್ಯವಾಗಿ ಕ್ಯೂಬಿಕ್ ಸಾಮರ್ಥ್ಯ ಹೆಚ್ಚಾದಂತೆ ಪ್ರೀಮಿಯಂ ಕೂಡ ಹೆಚ್ಚುತ್ತದೆ (ಉದಾ: ಅಧಿಕ ಎಂಜಿನ್ ಸಾಮರ್ಥ್ಯವನ್ನು ಹೊಂದಿದ ವಾಹನಗಳಿಗೆ ಅಧಿಕ ಪ್ರೀಮಿಯಂ ಪಾವತಿ ಮಾಡಬೇಕಾಗುತ್ತದೆ).

**ವಾಹನದ ನೋಂದಣಿ ವಲಯ:** ವಲಯ 'ಬಿ'ಯಲ್ಲಿ ನೋಂದಣಿ ಮಾಡಿದ ವಾಹನಕ್ಕೆ ಹೋಲಿಸಿದರೆ 'ಎ' ವಲಯದಲ್ಲಿ ನೋಂದಣಿ ಮಾಡಿದ ವಾಹನಕ್ಕೆ ಹೆಚ್ಚು ಪ್ರೀಮಿಯಂ ಇರುತ್ತದೆ. 'ಎ' ವಲಯದಲ್ಲಿ ಬೆಂಗಳೂರು, ಅಹಮದಾಬಾದ್, ಚೆನ್ನೈ, ಹೈದರಾಬಾದ್, ಕೊಲ್ಕತಾ, ಮುಂಬಯಿ, ನವದೆಹಲಿ ಮತ್ತು ಪುಣೆ ನಗರಗಳು ಬರುತ್ತವೆ. ಈ ನಗರಗಳಲ್ಲಿರುವ ವಾಹನಗಳು ಹೆಚ್ಚು ಕಳ್ಳತನಕ್ಕೆ ಒಳಗಾಗುತ್ತವೆ. ಭಾರತದ ಇತರ ಭಾಗಗಳು 'ಬಿ' ವಲಯದಲ್ಲಿ ಬರುತ್ತವೆ.

**ಶೂನ್ಯ ಸವಕಳಿ:** ಕ್ಲೈಮ್‌ಗಾಗಿ ಅರ್ಜಿ ಸಲ್ಲಿಸಿದಾಗ ವಾಹನದ ಭಾಗಗಳ ಮೇಲೆ ಸವಕಳಿಯ ಲೆಕ್ಕಹಾಕಲಾಗುತ್ತದೆ ಮತ್ತು ಅದಕ್ಕೆ ತಕ್ಕಂತೆ ಕ್ಲೈಮ್ ಪಾವತಿ ಮಾಡಲಾಗುತ್ತದೆ. ಆದರೆ ಶೂನ್ಯ ಸವಕಳಿಯನ್ನು ಆಯ್ಕೆ ಮಾಡಿಕೊಂಡಾಗ ವಾಹನದ ಮೌಲ್ಯದಲ್ಲಿ ಯಾವುದೇ ಸವಕಳಿ ಲೆಕ್ಕಹಾಕದೇ ಪೂರ್ಣ ಭಾಗವನ್ನು ಪಾವತಿ ಮಾಡಲಾಗುತ್ತದೆ. ಉದಾಹರಣೆಗೆ ನಿಮ್ಮ ಕಾರಿನ ಬಂಪರ್‌ಗೆ ಹಾನಿಯಾಗಿದೆ ಎಂದಿಟ್ಟುಕೊಳ್ಳೋಣ. ಹೊಸ ಬಂಪರ್ ಬದಲಾವಣೆ ಮಾಡುವುದರಿಂದ ಆಗುವ ವೆಚ್ಚ 10000 ರೂ. ಆಗಿರುತ್ತದೆ. ಕಾರಿನ ವಯಸ್ಸು ಎರಡು ವರ್ಷ. ಅದಕ್ಕೆ ಶೇ.30ರಷ್ಟು ಸವಕಳಿಯನ್ನು ಸೇರಿಸಿದರೆ ವಿಮಾ ಸಂಸ್ಥೆಯು ವಿಮಾ ಕ್ಲೈಮ್ ಆಗಿ 7000 ರೂ. ಪಾವತಿಸಬೇಕಾಗುತ್ತದೆ. ಆದರೆ ಶೂನ್ಯ ಸವಕಳಿಯನ್ನು ಆಯ್ಕೆ ಮಾಡಿಕೊಂಡರೆ ಪೂರ್ತಿ ಕ್ಲೈಮ್ ಹಣವನ್ನು ಪಾವತಿ ಮಾಡಬೇಕು.


INSPIRE INDIA
WEALTH PVT LTD

ಹೂಡಿಕೆ ವೇಳೆ -ನೆನಪಿರಲಿ ಇನ್‌ಸ್ಪೈರ್ ಇಂಡಿಯಾ ಎಎಂಎಫ್‌ಐ ನೋಂದಾಯಿತ ಮ್ಯೂಚುಯಲ್ ಫಂಡ್ ವಿತರಕರು



ಮ್ಯೂಚುಯಲ್ ಫಂಡ್ | ಸ್ಟಾಕ್ ಬ್ರೋಕಿಂಗ್ | ಹಣಕಾಸು ಯೋಜನೆ | ರಿಯಲ್ ಎಸ್ಟೇಟ್ | ತೆರಿಗೆ ಉಳಿತಾಯ ಬಾಂಡ್ | ವಿಮೆ | ಸಂಪತ್ತಿನ ನಿರ್ವಹಣೆ | ಹಣಕಾಸಿನ ಮೌಲ್ಯಮಾಪನ | ತೆರಿಗೆ ಸಲ್ಲಿಕೆ | ವಿಲ್ ಬರವಣಿಗೆ

ಹಕ್ಕುತ್ಯಾಗ

ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ದಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸ್ಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆ ಮಾಡುವ ಸಮರ್ಪಕತೆ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚುಯಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆ ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ. ಹಿಂದಿನ ನಿರ್ವಹಣೆಯ ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯದ ಮಾರ್ಗದರ್ಶಕವಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ಇನ್‌ಸ್ಪೈರ್ ಇಂಡಿಯಾ ವೆಲ್ತ್ ಪ್ರೈ.ಲಿ.
#65, ಸುರಾಸ ಎನ್‌ಕ್ಲೇವ್, ಮೊದಲ ಮಹಡಿ
ಪುಟ್ಟಣ್ಣ ರಸ್ತೆ, ಗಾಂಧಿ ಬಜಾರ್,
ಬಸವನಗುಡಿ, ಬೆಂಗಳೂರು -560004
9035414414, 080-42129917
info@inspireindiafs.com

'ನಿಮ್ಮ ಬದುಕಿಗೆ ದಿನಗಳನ್ನು ಸೇರಿಸಲು ಸಾಧ್ಯವಿಲ್ಲ, ಆದರೆ ನಿಮ್ಮ ದಿನಗಳಿಗೆ 'ಜೀವ'ವನ್ನು ತುಂಬಬಹುದು'